ಒದಗಿಸಿಕೊಡುವುದಾಗಿ ಸರ್ಕಾರ ಭರವಸೆ ಕೊಟ್ಟಿರ ಲಿಲ್ಲವೇ?

ಡಾ॥ ಆರ್. ನಾಗನಗೌಡ.—ಅವರಿಗೆ ಹಣವನ್ನು ಸಹ ಮುಂಗಡವಾಗಿ ಕೊಟ್ಟಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಕಾರ್ಖಾನೆಗೆ ಸಂಬಂಧಿಸಿದ ಹಾಗೆ ಒಂದು ಅಡ್ವೈಜರಿ ಸಮಿತಿ ಯನ್ನು ಏರ್ಪಡಿಸಿಲ್ಲವೇ?

ಡಾ॥ ಆರ್. ನಾಗನಗೌಡ.—ನೋಟೀಸ್.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಕಾರ್ಖಾನಿ ಗಳಲ್ಲಿ ಜಮೀನು ಪಡೆದಿರುವ ಕೆಲವರು ಮೈಸೂರು ದೇಶದ ಹೊರಗಡೆ ಇರುವುದು ಗೊತ್ತೆ?

ಡಾ॥ ಆರ್. ನಾಗನಗೌಡ.—ಇತ್ತೀಚೆಗೆ ಈ ಕಾರ್ಖಾನಿಗಳಲ್ಲಿ ಭೂಮಿ ಇರತಕ್ಕವರು ಅವರವರ ಹೆಸರಿನಲ್ಲಿಯೇ "ಪಟ್ಟಾ" ಪಡೆದಿರಬೇಕೆಂದಿದೆ. ಈ ವಿಷಯವನ್ನು ಕೂಲಂಕಷವಾಗಿ ಯೋಚಿಸಿ ಯಾರುಯಾರು ಭೂಮಿ ಸಾಗುವಳಿ ಮಾಡುತ್ತಿದ್ದಾರೆಯೋ ಅವರಿಗೆ ಅನುಕೂಲತೆ ದೊರಕುವಂತೆ ವ್ಯವಸ್ಥೆ ಮಾಡಲಾಗುತ್ತದೆ.

Onion, Garlic and Potato (Steps to prevent Fall in Prices)

Q.—447. Sri G. PAPANNA (Sidlaghatta—Chikaballapur).—

Will the Government be pleased to state :—

(*a*) whether any estimation could be made as to the quantity of production of onions, garlic and potato during harvests in the State;

(*b*) whether any steps could be taken to prevent the falling of prices of stock of these articles, remaining after meeting the needs of the country?

A.—Dr. R. NAGAN GOWDA (Minister for Agriculture).—

(*a*) Yes.

(*b*) Yes.

ಶ್ರೀ ಜಿ. ಪಾಪಣ್ಣ.—ಈಗಾಗಲೇ ಇವುಗಳ production ಎಷ್ಟಾಗಿದೆ ಎಂಬ ಬಗ್ಗೆ ಅಂದಾಜು ಮಾಡ ರಾಗಿದೆಯೇ?

*ಡಾ॥ ಆರ್. ನಾಗನಗೌಡ.—ಬೆಳ್ಳುಳ್ಳಿ 1953-54 ರಲ್ಲಿ 3,568 ಎಕರೆಯಲ್ಲಿ ಬೆಳೆದು 1,008 ಟನ್‌ಗಳಷ್ಟು ಉತ್ಪತ್ತಿಯಾಗಿದೆಯೆಂದೂ, ಈರುಳ್ಳಿ 17,169 ಎಕರೆ ಯಲ್ಲಿ ಬೆಳೆದು 5,619 ಟನ್‌ಗಳಷ್ಟು ಉತ್ಪತ್ತಿಯಾಗಿದೆ ಯೆಂದು ಅಂದಾಜು ಮಾಡಲಾಗಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಇವುಗಳ ಧಾರಣೆ ಇಳಿದು ಹೋಗದಂತೆ ಏನು ಕ್ರಮ ಕೈಗೊಂಡಿದ್ದೀರಿ?

ಡಾ॥ ಆರ್. ನಾಗನಗೌಡ.—ಸರಿಯಾದ ಧಾರಣೆ ದೊರಕಲು ಇವುಗಳನ್ನು export ಮಾಡುವುದಕ್ಕೆ permission ಕೊಡಬೇಕೆಂದು ಇಂಡಿಯಾ ಸರ್ಕಾರಕ್ಕೆ ತಿಳಿಸಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಆ ರೀತಿ ಕೇಂದ್ರ ಸರ್ಕಾ ರದವರು permission ಕೊಡುತ್ತಿದ್ದಾರೆಯೇ?

ಡಾ॥ ಆರ್. ನಾಗನಗೌಡ.—ಕೊಡುತ್ತಿದ್ದಾರೆ.

ಶ್ರೀ ಜಿ. ಪುಟ್ಟಸ್ವಾಮಿ.—ಧಾರಣೆಗಳ ಏರುಪೇರಿ ನಿಂದ ಇವುಗಳನ್ನು ಬೆಳೆಯುವ ರೈತರಿಗೆ ತೊಂದರೆ ಯಾಗುತ್ತಿದೆಯೆಂದು ಸರ್ಕಾರದ ಗಮನಕ್ಕೆ ಬಂದಿ ಲ್ಲವೇ?

ಡಾ॥ ಆರ್. ನಾಗನಗೌಡ.—ಉತ್ಪತ್ತಿಯಲ್ಲ ಏರು ಪೇರಾದರೆ ಧಾರಣೆ ಸಹ ಹಾಗೆಯೇ ಆಗುತ್ತದೆ.

1 P.M.

ಶ್ರೀ ವಿ. ಆರ್. ನಾಯ್ಡು.—(ಬ) ಪ್ರಶ್ನೆಗೆ ಉತ್ತರ ವಾಗಿ ಕೈಗೊಳ್ಳುವರು ಎಂದು ಹೇಳಿದ್ದೀರಿ. ಹಾಗಾ ದರೆ ಈ ಪದಾರ್ಥಗಳನ್ನು ತಿನ್ನುವುದು ಕಡಮೆ ಆಗ ಬೇಕು ಎಂತಲೇ ಸರ್ಕಾರದ ನೀತಿ?

ಡಾ॥ ಆರ್. ನಾಗನಗೌಡ.—ಇಲ್ಲ, ಎಷ್ಟು ಬೇಕೋ ಅಷ್ಟು ಬೆಳೆಯಬೇಕು ಎಂದೇ ಇರುವುದು.

ಶ್ರೀ ವಿ. ಆರ್. ನಾಯ್ಡು.—ಹಾಗಾದರೆ ಯಾವಾ ಗಲೂ ಬೆಲೆ ಜಾಸ್ತಿಯಾಗಿಯೇ ಇರಬೇಕು ಎಂದರೆ, ಕಡಮೆ ಬೆಳೆಯಬೇಕು ಎಂತಲೇ, ಕಡಮೆ ತಿನ್ನಬೇಕು ಎಂತಲೇ?

(No answer).

ಶ್ರೀ ಜಿ. ನಾರಾಯಣಗೌಡ.—ನಮ್ಮ ದೇಶದಲ್ಲಿ ಆಲೂಗಡ್ಡೆಯನ್ನು ರಫ್ತು ಮಾಡಲು ಎಷ್ಟು ಜನಕ್ಕೆ ಪರ್ಮಿಟ್ ಕೊಟ್ಟಿದ್ದೀರಿ?

ಡಾ॥ ಆರ್. ನಾಗನಗೌಡ.—ನೋಟೀಸ್.

ಶ್ರೀ ಜಿ. ನಾರಾಯಣಗೌಡ.—ಹೆಚ್ಚು ಜನರಿಗೆ ಪರ್ಮಿಟ್ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಡಾ॥ ಆರ್. ನಾಗನಗೌಡ.—ಯಾರಾದರೂ ಬೇಕು ಎಂದು ಹೇಳಿದರೆ ಅದನ್ನು ಪರಿಶೀಲನೆ ಮಾಡಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

QUESTIONS FOR ANSWERS ON THE DAY

(But not taken up.)

Sugarcane Cess Fund Roads.

Q.—52. Sri B. P. NAGARAJA MURTHY (Malavalli).—

Will the Government be pleased to state :—

(*a*) the total mileage of road undertaken by the Sugarcane Cess Fund Committee since its inception in the Visvesvaraya Canal area;

(*b*) the total mileage that has been completed so far;

(*c*) the total amount spent on roads since its inception up to 1st January 1954;

(*d*) the total amount spent and the total mileage of road in each taluk of the Visvesvaraya Canal area may kindly be furnished?